**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ</u>**
**<u>ಚಿಂಚೋಳಿ</u>**

***<u>ಸಿ. ಸಿ. ನಂ. 50/2025</u>***

**ಫಿರ್ಯಾದಿ :** ಸರ್ಕಾರದ ಪರವಾಗಿ ಸುಲೇಪೇಟ ಪೋಲೀಸರು.

- ವಿರುದ್ದ -

**ಆರೋಪಿಃ**

ಹಣಮಂತ ತಂದೆ ಪ್ರಕಾಶ ರಾಮಪೂರೆ, 22 ವರ್ಷ, ಉಃ ಡ್ರೈವರ, ವಾಸಃ ರುಮ್ಮನಗೂಡ ಗ್ರಾಮ, ತಾಃ ಕಾಳಗಿ.

**ದೋಷಾರೋಪಣೆ**

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಆರೋಪಿಯಾದ ನಿನ್ನ ಮೇಲೆ ಮಾಡುವ ಆರೋಪಣೆ ಏನೆಂದರೆ.

ದಿನಾಂಕಃ 09-10-2024 ರಂದು ಸುಲೇಪೇಟ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಸುಲೇಪೇಟ ಗ್ರಾಮದಲ್ಲಿ ಚಾಸಾ-1 ವೀರೇಶ ನೇದ್ದವರು ತಮ್ಮ ಆಯರ್ನ ಮೋಟಾರಸ ಎಂಬ ಸೆಕೆಂಡ ಹ್ಯಾಂಡ ಮೋಟಾರ ಸೈಕಲಗಳ ಶೋರೂಮನಲ್ಲಿ ಚಾಸಾ-6 ನಂದೀಶ ರವರ ಸಂಗಡ ಇರುವಾಗ ಆರೋಪಿ ನೀನು ಮೋಟಾರ ಸೈಕಲ ಖರೀದಿ ಮಾಡುತ್ತೇನೆಂದು ಬಂದು ಪರಿಚಯ ಮಾಡಿಕೊಂಡು ಹೀರೋ ಕಂಪನಿಯ ಮೋಟಾರ ಸೈಕಲ ನಂಃ KA-32-HC-8718 ನೇದ್ದನ್ನು ಟ್ರಾಯಲ ಮಾಡುವ ನೆಪದಲ್ಲಿ ಕಳ್ಳತನ ಮಾಡಿಕೊಂಡು

ಹೋಗಿದ್ದ ಕಾರಣ ಹಾಗೂ ದಿನಾಂಕಃ 16-10-2024 ರಂದು ಸಾಯಂಕಾಲ 03-30 ಗಂಟೆ ಸುಮಾರಿಗೆ ಬೀದರನ ಕುಂಬಾರವಾಡದಲ್ಲಿ ಬಜಾಜ ಶೊರೂಮ ಹತ್ತಿರ ಚಾಸಾ-7 ಶರಣಪ್ರಕಾರಶ ರವರ ಕಡೆ ಹೋಗಿ ಮೋಟಾರ ಸೈಕಲ ನಂಃ KA-32-HC-8718 ನೇದ್ದನ್ನು ಅವರ ಹತ್ತಿರ ಬಿಟ್ಟು ಮೋಟಾರ ಸೈಕಲ ನಂಃ TS-13-EH-1721 ನೇದ್ದನ್ನು ಖರೀದಿ ಮಾಡುವ ನೆಪದಲ್ಲಿ ಟ್ರಾಯಲ್ ನೋಡುತ್ತೇನೆಂದು ಕಳ್ಳತನ ಮಾಡಿಕೊಂಡು ಹೋಗಿದ್ದ ಕಾರಣ ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 303(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ

ದಿನಾಂಕಃ 31.07.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
C/c ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.